# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1043 |
| 2 | ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 12–03–2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರತಿ ಮಧ್ಯಮ ಮಳೆಯ ನಂತರ ಬೆಂಗಳೂರಿನಲ್ಲಿ ಪ್ರವಾಹ ಉಂಟಾಗುತ್ತಿರುವುದರಿಂದ ಸರ್ಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ; | • 2023–24ನೇ ಸಾಲಿನವರೆಗೂ ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟಾರೆ 215 ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಿ, ಇದರಲ್ಲಿ 166 ಪ್ರವಾಹ ಪೀಡಿತ ಪ್ರದೇಶಗಳನ್ನು ಪ್ರವಾಹ ಮುಕ್ತ ಪ್ರದೇಶಗಳನ್ನಾಗಿ ಮಾಡಲಾಗಿರುತ್ತದೆ. |
| ಆ) | ಎಷ್ಟು ಮಳೆ ನೀರಿನ ಚರಂಡಿಗಳು ಅತಿಕ್ರಮಣಗೊಂಡಿವೆ ಮತ್ತು ಎಷ್ಟು ಭೂಮಿಯನ್ನು ತೆರವುಗೊಳಿಸಲಾಗಿದೆ; | ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 2626 ಸಂಖ್ಯೆಯ ಮಳೆನೀರಿನ ಚರಂಡಿಗಳು ಅತಿಕ್ರಮಣಗೊಂಡಿದ್ದು, 960 ಅತಿಕ್ರಮಣಗಳನ್ನು ತೆರವುಗೊಳಿಸಲಾಗಿರುತ್ತದೆ. ಉಳಿದ ಅತಿಕ್ರಮಣಗಳನ್ನು ತೆರವುಗೊಳಿಸಲು ಮಾನ್ಯ ನ್ಯಾಯಾಲಯ ಮತ್ತಿತರೆ ವಿವಿಧ ಹಂತಗಳಲ್ಲಿ ಕ್ರಮವಹಿಸಲಾಗುತ್ತಿದೆ. |
| ಇ) | ಮುಂದಿನ ಮಾನ್ಸೂನ್‌ಗೆ ಮೊದಲು ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ? | • ವಿಶ್ವ ಬ್ಯಾಂಕ್ ನೆರವಿನಲ್ಲಿ ಸುಮಾರು 173 ಕಿ.ಮೀ ಉದ್ದದ ತಡೆಗೋಡೆ ನಿರ್ಮಾಣ ಹಾಗೂ 80 ಕಿ.ಮೀ ಉದ್ದದ ಶಿಥಿಲಾವಸ್ಥೆಯಲ್ಲಿರುವ ತಡೆಗೋಡೆಗಳ ಮರುವಿನ್ಯಾಸಗೊಳಿಸುವ ಕಾಮಗಾರಿಯನ್ನು 16 ಪ್ಯಾಕೇಜ್ ಕಾಮಗಾರಿಗಳಡಿ ರೂ.2000.00 ಕೋಟಿಗಳ ವೆಚ್ಚದಲ್ಲಿ ಕ್ರಮವಹಿಸಲಾಗುತ್ತಿರುತ್ತದೆ.<br>• ಎನ್.ಡಿ.ಎಂ.ಎಫ್ ಯೋಜನೆ ಅಡಿಯಲ್ಲಿ ಸುಮಾರು 11.71 ಕಿ.ಮೀ ಉದ್ದದ ತಡೆಗೋಡೆ ಹಾಗೂ ಬಾಕ್ಸ್ ಡ್ರೈನ್ ನಿರ್ಮಾಣ ಮತ್ತು 31 ಕಲ್ವರ್ಟ್ / ಬ್ರಿಡ್ಜ್‌ಗಳನ್ನು ಮರುವಿನ್ಯಾಸಗೊಳಿಸುವ ಕಾಮಗಾರಿಯನ್ನು 13 ಪ್ಯಾಕೇಜ್ ಕಾಮಗಾರಿಗಳಡಿ ರೂ.172.25 ಕೋಟಿಗಳ ವೆಚ್ಚದಲ್ಲಿ ಕ್ರಮವಹಿಸಲಾಗುತ್ತಿರುತ್ತದೆ. |

**ನಅಇ 213 ಎಂಎನ್‌ವೈ 2026 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ